ಅನುಬಂಧ – 5

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ

ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 6)

ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭಾರತ ದಂಡ ಸಂಹಿತೆ (1860ರ ಕೇಂದ್ರ ಅಧಿನಿಯಮ 45) ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2) ಇವುಗಳನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1860ರ ಕೇಂದ್ರ ಅಧಿನಿಯಮ 45ರ ತಿದ್ದುಪಡಿ.– ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ 45), 441ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**441. ಅಪರಾಧಿಕ ಅತಿಕ್ರಮಣ.**– ಯಾವೊಬ್ಬ ವ್ಯಕ್ತಿಯು ಮತ್ತೊಬ್ಬನ ಸ್ವಾಧೀನದಲ್ಲಿರುವ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ, ಅಪರಾಧ ಮಾಡುವ ಉದ್ದೇಶದಿಂದ ಅಥವಾ ಅಂಥ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಅವನಿಗೆ ಕಿರುಕುಳ ಕೊಡುವ ಉದ್ದೇಶದಿಂದ ಪ್ರವೇಶಿಸಿದರೆ ಅಥವಾ ಅಂಥ ಸ್ವತ್ತಿನೊಳಗೆ ಅಥವಾ ಅದರ ಮೇಲೆ ಕಾನೂನುಬದ್ಧವಾಗಿ ಪ್ರವೇಶಿಸಿ, ಕಾನೂನುಬಾಹಿರವಾಗಿ ಅಂಥ ಯಾವೊಬ್ಬ ವ್ಯಕ್ತಿಗೆ ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶದಿಂದ ಅಥವಾ ಒಂದು ಅಪರಾಧವನ್ನು ಮಾಡುವ ಉದ್ದೇಶದಿಂದ ಅದರಲ್ಲಿಯೇ ಉಳಿದರೆ;

ಅಥವಾ ಭಾರತ ದಂಡ ಸಂಹಿತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2009 ಜಾರಿಗೆ ಬರುವ ಪೂರ್ವದಲ್ಲಿ ಅಥವಾ ತರುವಾಯದಲ್ಲಿ, ಅಂಥ ಸ್ವತ್ತಿನೊಳಗೆ ಅಥವಾ ಅದರ ಮೇಲೆ, ಅಂಥ ಸ್ವತ್ತಿನ ಸ್ವಾಧೀನವನ್ನು ಅನಧಿಕೃತವಾಗಿ ತೆಗೆದುಕೊಳ್ಳುವ ಅಥವಾ ಅಂಥ ಸ್ವತ್ತಿನಿಂದ ಅನಧಿಕೃತ ಪ್ರಯೋಜನ ಪಡೆಯುವ ಉದ್ದೇಶದಿಂದ ಪ್ರವೇಶಿಸಿ, ಆ ಇನ್ನೊಬ್ಬ ವ್ಯಕ್ತಿಯು ಆತನಿಗೆ ಯುಕ್ತವಾದ ಲಿಖಿತ ನೋಟೀಸನ್ನು ನೀಡಿ ಅದರಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಅಂಥ ಸ್ವತ್ತಿನಿಂದ ಹೊರಗೆಹೋಗುವಂತೆ ಅಥವಾ ಅದರ ಸ್ವಾಧೀನವನ್ನು ಅಥವಾ ಬಳಕೆಯನ್ನು ಬಿಟ್ಟುಕೊಡುವಂತೆ ಕೇಳಿದಾಗ ಹಾಗೆ ಮಾಡಲು ತಪ್ಪಿದರೆ, ಅವನು ಆಪರಾಧಿಕ ಅತಿಕ್ರಮಣ ಮಾಡಿದ್ದಾನೆ ಎಂದು ಹೇಳಲಾಗುತ್ತದೆ."

3. 1974ರ ಕೇಂದ್ರ ಅಧಿನಿಯಮ 2ರ ತಿದ್ದುಪಡಿ.– ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2), ಮೊದಲನೇ ಅನುಸೂಚಿಯಲ್ಲಿ, 447ನೇ ಪ್ರಕರಣದಲ್ಲಿ, (5)ನೇ ಅಂಕಣದಲ್ಲಿ " ಜಾಮೀನೀಯ " ಎಂಬ ಪದಕ್ಕೆ " ಜಾಮೀನೀಯವಲ್ಲದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2004ರ 4064ರ ಶ್ರೀ ಎಸ್. ಡಿ. ಬಂಡಿ ವಿರುದ್ಧ ವಿಭಾಗೀಯ ಸಾರಿಗೆ ಅಧಿಕಾರಿ, ಕ.ರಾ.ರ.ಸಾ.ನಿ ಮತ್ತು ಇತರರು ಪ್ರಕರಣದಲ್ಲಿ ಈ ಮುಂದಿನ ನಿರ್ದೇಶನಗಳನ್ನು ನೀಡಿದೆ, ಎಂದರೆ:–

"11. ಸರ್ಕಾರಿ ಮನೆಗಳು ಮತ್ತು ಆವರಣಗಳ ಹಂಚಿಕೆಗಾಗಿ ವರ್ಷಾನುಗಟ್ಟಲೆ ಕಾಯುತ್ತಿರುವ ಬಹಳಷ್ಟು ಸರ್ಕಾರಿ ನೌಕರರ ಹಿತಾಸಕ್ತಿಗೆ ಬಾಧಕವಾಗುವ ಹಾಗೆ ಮತ್ತು ನಾಗರಿಕ ಸಮಾಜದಲ್ಲಿ ಜಾರಿಯಲ್ಲಿರುವ ಎಲ್ಲಾ ನಿಯಮಗಳನ್ನು ರಾಜಾರೋಷವಾಗಿ ಉಲ್ಲಂಘಿಸಿ ರಾಷ್ಟ್ರದ ಬಹುಪಾಲು ಎಲ್ಲಾ ಭಾಗಗಳಲ್ಲೂ ಸರ್ಕಾರಿ ಮನೆಗಳಲ್ಲಿ, ಆವರಣಗಳಲ್ಲಿ, ಅನಧಿಕೃತವಾಗಿ ವಾಸಿಸುತ್ತಿರುವ ಪ್ರಕರಣಗಳು ನಾಯಿಕೊಡೆಯಂತೆ ಬೆಳೆಯುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಉತ್ತರ ಪ್ರದೇಶ ಅಥವಾ ಒರಿಸ್ಸಾ ರಾಜ್ಯಗಳಲ್ಲಿ ಮಾಡಿರುವಂತೆಯೇ ಭಾರತ ದಂಡ ಸಂಹಿತೆ 441ನೇ ಪ್ರಕರಣಕ್ಕೆ ತಿದ್ದುಪಡಿಯನ್ನು ಮಾಡುವುದರ ಅಪೇಕ್ಷಣೀಯತೆಯನ್ನು ಭಾರತದ ಎಲ್ಲಾ ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಪರಿಗಣಿಸುವುದಕ್ಕೆ ಇದು ಸೂಕ್ತ ಸಮಯ ಎಂದು ನಾವು ಭಾವಿಸುತ್ತೇವೆ. ಸರ್ಕಾರಿ ನೌಕರರು ಸರ್ಕಾರಿ ಮನೆ ಮತ್ತು ಆವರಣಗಳನ್ನು ಖಾಲಿ ಮಾಡಬೇಕೆಂದು ಅವರಿಗೆ ನೋಟೀಸನ್ನು ಜಾರಿ ಮಾಡಿದ ಮೇಲೂ ಅವರು ಖಾಲಿ ಮಾಡದೇ ಮುಂದುವರೆದ ಸಂದರ್ಭಕ್ಕೆ ಸಂಬಂಧಪಡುವಷ್ಟು 441 ಐಪಿಸಿ ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಜಾಮೀನೀಯ ವಲ್ಲವೆಂದು ಮಾಡುವುದಕ್ಕೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಮೊದಲನೆಯ ಅನುಸೂಚಿಗೆ ತಿದ್ದುಪಡಿ ತರುವುದರ ಅಪೇಕ್ಷಣೀಯತೆಯನ್ನು ಸಹಾ ಅವರು ಪರಿಗಣಿಸಬೇಕು. ನಿಗದಿಪಡಿಸಿದ ಮುಂದಿನ ದಿನಾಂಕಕ್ಕಿಂತ ಮುಂಚೆ ಈ ಬಗ್ಗೆ ಇತರ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಸ್ಪಂದಿಸಬೇಕೆಂದು ನಾವು ನಿರ್ದೇಶನ ನೀಡುತ್ತೇವೆ."

ಈ ಮೇಲಿನ ನಿರ್ದೇಶನಗಳ ಪಾಲನೆಯ ಕ್ರಮವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಭಾರತ ದಂಡ ಸಂಹಿತೆಯ 441ನೇ ಪ್ರಕರಣಕ್ಕೆ ಹೊಸ ಪ್ರಕರಣವನ್ನು ಪ್ರತಿಯೋಜಿಸುವುದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 ರ (1974ರ ಕೇಂದ್ರ ಅಧಿನಿಯಮ 2) ಮೊದಲನೇ

ಅನುಸೂಚಿಯಲ್ಲಿ ಭಾರತ ದಂಡ ಸಂಹಿತೆಯ 447ನೇ ಪ್ರಕರಣಕ್ಕೆ ಸಂಬಂಧಿಸಿದ ನಮೂದುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಹೊಸ ನಮೂದನ್ನು ಪ್ರತಿಯೋಜಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಸರ್ಕಾರಿ ವಸತಿಗೃಹಗಳಲ್ಲಿ ಅನಧಿಕೃತವಾಗಿ ವಾಸ ಮಾಡುತ್ತಿರುವ ಅಧಿಕಾರಿಗಳ/ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ಉಪಬಂಧಿಸ ಬೇಕೆಂದು ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 4064/2004ರಲ್ಲಿ ನೀಡಿದ ತೀರ್ಪಿನ ಪಾಲನೆ ಮಾಡಿರುವ ಭಾರತ ದಂಡ ಸಂಹಿತೆಯ 441 ನೇ ಪ್ರಕರಣದ ಈ ಪ್ರಸ್ತಾವಿತ ತಿದ್ದುಪಡಿಯಿಂದ ಯಾವ ವೆಚ್ಚವೂ ಆಗುವುದಿಲ್ಲ.

ಡಾ ವಿ.ಎಸ್. ಆಚಾರ್ಯ
ಗೃಹ ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ 45)
ಉದ್ಧೃತ ಭಾಗ

xx xx xx

441. ಅಪರಾಧಿಕ ಅತಿಕ್ರಮಣ.– ಯಾವೊಬ್ಬನು ಅಪರಾಧ ಮಾಡುವ ಉದ್ದೇಶದಿಂದ ಇನ್ನೊಬ್ಬನ ಸ್ವಾಧೀನದಲ್ಲಿರುವ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ, ಅಂಥ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶಕ್ಕಾಗಿ ಪ್ರವೇಶಿಸಿದರೆ, ಅಥವಾ ಕಾನೂನು ಬದ್ಧವಾಗಿ ಅಂಥ ಸ್ವತ್ತಿನೊಳಕ್ಕೆ ಅಥವಾ ಅದರ ಮೇಲೆ ಪ್ರವೇಶಿಸಿ ಕಾನೂನಿಗೆ ವಿರುದ್ಧವಾಗಿ ಅಂಥ ಯಾವೊಬ್ಬ ವ್ಯಕ್ತಿಯನ್ನು ಹೆದರಿಸುವ, ಅವಮಾನಗೊಳಿಸುವ ಅಥವಾ ಕಿರುಕುಳ ಕೊಡುವ ಉದ್ದೇಶದಿಂದ ಅಥವಾ ಅಪರಾಧ ಮಾಡುವ ಉದ್ದೇಶದಿಂದ ಅಲ್ಲೇ ಉಳಿದರೆ, ಅವನು ಅಪರಾಧಿಕ ಅತಿಕ್ರಮಣ ಮಾಡಿದ್ದಾನೆಂದು ಹೇಳಲಾಗುತ್ತದೆ.

xx xx xx

ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ 2)
ಉದ್ಧೃತ ಭಾಗ

xx xx xx

ಮೊದಲನೇ ಅನುಸೂಚಿ

xx xx xx

ಪ್ರಕರಣ 447.– xx xx

ಅಂಕಣ 5: ಜಾಮೀನೀಯ